O.S.31 /2018  P.W.1

ದಿನಾಂಕ 18.11.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ  ಮಾನ್ಯ ಶ್ರೀ ಸ.ಸ.ಅ.  ವಕೀಲರಿಂದಃ

ನಿಪಿ-5 ರಲ್ಲಿ ತೋರಿಸಿರುವ ರಸ್ತೆಯ ಅಬಿವೃದ್ದಿ ಕಾಮಗಾರಿಯಲ್ಲಿದ್ದು ಸದರಿ ರಸ್ತೆಯ ಜಂಟಿ ಸರ್ವೆ ಮಾಡಿ, ಗಡಿಯನ್ನು ಗುರುತಿಸಿ ನಮ್ಮ ಜಾಗವು ಸದರಿ ರಸ್ತೆ ಅಗಲೀಕರಣಕ್ಕಾಗಿ ಉಪಯೋಗಿಸಿಕೊಂಡಿದ್ದರೆ ಆ ಜಾಗಕ್ಕಾಗಿ ನಮಗೆ  ಮಾರ್ಕೆಟ್ ದರದಂತೆ ಪರಿಹಾರ ನೀಡಲಾಗುವುದು ಎಂದು 1 ನೇ ಪ್ರತಿವಾದಿ ತಿಳಿಸಿರುತ್ತಾರೆ ಎಂದರೆ ಸರಿ. ರಾಜ್ಯ ಹೆದ್ದಾರಿ 27 ರ ರಸ್ತೆ ಕಾಮಗಾರಿಯಲ್ಲಿ ನಮ್ಮ ಜಾಗವು ಸೇರದೇ ಇರುವ ಕಾರಣ ನಮಗೆ ಪರಿಹಾರ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. PWD ರವರಿಗೆ ಖಾಸಗಿ ಆಟೋ ನಿಲ್ದಾಣಗಳನ್ನು ನಿರ್ಮಾಣ ಮಾಡಲು ಕಾನೂನಿನಲ್ಲಿ ಅವಕಾಶ ಇಲ್ಲ ಎಂದರೆ ಸರಿ.

ನಿಪಿ-11 ರಲ್ಲಿ  ಕಾಣುತ್ತಿರುವ ರಸ್ತೆಯಿಂದ  ದಾವಾ ಎ ಶೆಡ್ಯೂಲ್ ಆಸ್ತಿಗೆ ಹೋಗಲು ಯಾವುದೇ ಅಡಚಣೆ ಇರುವುದಿಲ್ಲ ಎಂದರೆ ಸರಿ. ನಿಪಿ-7 ರಿಂದ 12  ರಲ್ಲಿ ಕಾಣುತ್ತಿರುವ ತಡೆಗೋಡೆಯು PWD  ರವರು ಮಾಡಿರುವ ತಡೆಗೋಡೆ ಎಂದರೆ ಸರಿ. ಸದರಿ ತಡೆಗೋಡೆ ಬಾಳೇಹೊನ್ನೂರಿನಿಂದ ಮಾಗುಂಡಿಗೆ ಹೋಗುವ ರಸ್ತೆಯ ಬದಿಯಲ್ಲಿ  ಮಾಡಿರುವ ತಡೆಗೋಡೆ ಎಂದರೆ ಸರಿ. ತಡೆಗೋಡೆ ಸ್ಥಳದಿಂದ ದಾವಾ ಎ ಶೆಡ್ಯೂಲ್ ಆಸ್ತಿಗೆ ಹೋಗಲು ಯಾವುದೇ ಅವಕಾಶ ಇಲ್ಲ ಎಂದರೆ ಸರಿ. ಸ.ನಂ.2 ನನಗೆ ಸಂಬಂಧಪಟ್ಟಾದ್ದಾಗಿರುತ್ತದೆ. ಸದರಿ ಸ.ನಂ. ನಲ್ಲಿ 4 ಎಕ್ರೆ 12 ಗುಂಟೆ ಜಮೀನು ಇರುತ್ತದೆ. ಎ ದಾವಾ ಆಸ್ತಿಯ ಪೂರ್ವಕ್ಕೆಃ  ತಣ್ಣೀರು ಹಳ್ಳ, ಪಶ್ಚಿಮಕ್ಕೆ ಃ ಚಿಕ್ಕಮಗಳೂರು ರಸ್ತೆ, ದಕ್ಷಿಣಕ್ಕೆಃ ಕೊಟ್ಟಿಗೆಹಾರ ರಸ್ತೆ ಇರುತ್ತದೆ.  ಕೊಟ್ಟಿಗೆಹಾರ ರಸ್ತೆಯಿಂದ ನನ್ನ ದಾವಾ ಎ ಶೆಡ್ಯೂಲ್ ಆಸ್ತಿಗೆ ಹೋಗಲು ಯಾವುದೇ ಅಡೆತಡೆ ಇಲ್ಲ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲ್ ಆಸ್ತಿಯು ದಾವಾ ಎ ಶೆಡ್ಯೂಲ್ ಆಸ್ತಿಯ ಒಂದು ಭಾಗ ಅಲ್ಲ ಎಂದರೆ ಸರಿಯಲ್ಲ. ಸರ್ಕಾರದ ಜಾಗದಲ್ಲಿ ಸಾರ್ವಜನೀಕರು ಸಾರ್ವಜನೀಕ ಉದ್ದೇಶಕ್ಕಾಗಿ ಬಳಸಿದ ಜಾಗವನ್ನು  ಪ್ರಶ್ನಿಸುವ ಹಕ್ಕು ನನಗೆ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ಅನವಶ್ಯಕವಾಗಿ ತೊಂದರೆ ಕೊಡುವ ಕಾರಣದಿಂದ ಅವರ ವಿರುದ್ದ ಸುಳ್ಳು ದಾವೆ ಹೂಡಿ ಸುಳ್ಳು  ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾದಲ್ಲಿ ಕೇಳಿರುವ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ.ರಾ. ಪುರ.